Akashvani: Bangalore
National Bulletin In Kannada
04.06.2024: 13.10hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

04.06.2024: 13.10hrs
*************

ಮುಖ್ಯಾಂಶಗಳು:

1. ಲೋಕಸಭೆ ಚುನಾವಣೆಯ ಮತ ಎಣಿಕೆ ಪ್ರಗತಿಯಲ್ಲಿ; ಬಿಜೆಪಿ ೨೪೦ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮುನ್ನಡೆ; ಕೇರಳದಲ್ಲಿ ಖಾತೆ ಆರಂಭಿಸುವ ಸಾಧ್ಯತೆ; ಕಾಂಗ್ರೆಸ್‌ಗೆ ೯೪ ಕ್ಷೇತ್ರಗಳಲ್ಲಿ ಮೇಲುಗೈ
2. ಪ್ರಧಾನಿ ನರೇಂದ್ರ ಮೋದಿ ಮುನ್ನಡೆ; ರಾಹುಲ್ ಗಾಂಧಿ, ರಾಯ್ ಬರೇಲಿ ಮತ್ತು ವೈನಾಡಿನಲ್ಲಿ ಮೇಲುಗೈ
3. ಕರ್ನಾಟಕದಲ್ಲಿ ಬಿಜೆಪಿ ೧೮; ಜೆಡಿಎಸ್ ೨, ಕಾಂಗ್ರೆಸ್ ೧೦ ಸ್ಥಾನಗಳಲ್ಲಿ ಮುನ್ನಡೆಯಲ್ಲಿ
4. ವಿಧಾನಸಭೆ ಚುನಾವಣೆ; ಒಡಿಶಾದಲ್ಲಿ ಬಿಜೆಪಿಗೆ ಮೊದಲ ಸ್ಥಾನ; ಆಂಧ್ರಪ್ರದೇಶದಲ್ಲಿ ಟಿಡಿಪಿ ಅಗ್ರಸ್ಥಾನದಲ್ಲಿ

******

ಲೋಕಸಭಾ ಚುನಾವಣೆ ಮತ ಎಣಿಕೆ ಪ್ರಗತಿಯಲ್ಲಿದೆ. ಗುಜರಾತ್‌ನ ಸೂರತ್ ಲೋಕಸಭಾ ಕ್ಷೇತ್ರದ ಏಕೈಕ ಅಭ್ಯರ್ಥಿ ಬಿಜೆಪಿಯ ಮುಕೇಶ್ ಕುಮಾರ್ ಚಂದ್ರಕಾಂತ್ ದಲಾಲ್ ಅವರನ್ನು ವಿಜೇತ ಎಂದು ಚುನಾವಣೆ ಆಯೋಗ ಘೋಷಿಸಿದೆ.

****

ಬಿಜೆಪಿ-೨೪೨, ಐಎನ್‌ಸಿ-೯೮, ಎಸ್‌ಪಿ-೩೪, ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್-ಎಐಟಿಸಿ-೩೧, ಡಿಎಂಕೆ-೨೧, ತೆಲುಗುದೇಶಂ-ಟಿಡಿಪಿ-೧೬, ಜೆಡಿಯು-೧೫, ಶಿವಸೇನಾ ಉದ್ಧವ್ ಬಾಳೆ ಸಾಹೇಬ್ ಠಾಕ್ರೆ ಬಣ ೯, ಶಿವಸೇನೆ ಶಿಂಧೆ ಬಣ-೭, ರಾಷ್ಟ್ರೀಯ ಕಾಂಗ್ರೆಸ್ ಪಾರ್ಟಿ ಶರದ್ ೮, ಯುವಜನ ಶ್ರಮಿಕ ರಿತು ಕಾಂಗ್ರೆಸ್ ಪಾರ್ಟಿ - ವೈಎಸ್‌ಆರ್‌ಸಿಪಿ - ೪, ಲೋಕ ಜನಶಕ್ತಿ ಪಾರ್ಟಿ

ರಾಮ್ - ವಿಲಾಸ್-ಎಲ್‌ಜೆಪಿಆರ್‌ವಿ-೫, ಆಮ್ ಆದ್ಮಿ ಪಾರ್ಟಿ-೩, ಸಿಪಿಐಎಂ-೨, ರಾಷ್ಟ್ರೀಯ ಜನತಾದಳ-೨, ಜನತಾದಳ ಜೆಡಿಎಸ್-೨, ಇಂಡಿಯನ್ ಯುನಿಯನ್ ಮುಸ್ಲಿಂ ಲೀಗ್-ಇಯುಎಂಎಲ್-೩ ಸ್ಥಾನಗಳಲ್ಲಿ ಮುನ್ನಡೆ ಪಡೆದಿದೆ.

****

ಉತ್ತರ ಪ್ರದೇಶದ ವಾರಾಣಸಿ ಕ್ಷೇತ್ರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮುನ್ನಡೆ ಸಾಧಿಸಿದ್ದಾರೆ. ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಅಜಯ್ ರೈ ಅವರಿಂದ ೮೩ ಸಾವಿರದ ೪೯೮ ಮತಗಳ ಮುನ್ನಡೆ ಸಾಧಿಸಿದ್ದಾರೆ. ಹಿಮಾಚಲ ಪ್ರದೇಶದ ಮಂಡಿಕ್ಷೇತ್ರದಲ್ಲಿ ಬಿಜೆಪಿಯ ಕಂಗನಾ ರಣವತ್ ಅವರು, ಕಾಂಗ್ರೆಸ್‌ನ ವಿಕ್ರಮಾಧಿತ್ಯಾ ಸಿಂಗ್ ವಿರುದ್ಧ ೫೯ ಸಾವಿರದ ೧೪ ಮತಗಳ ಮುನ್ನಡೆಯಲ್ಲಿದ್ದಾರೆ. ತಮಿಳುನಾಡಿನ ಕೊಯಮತ್ತೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಗಣಪತಿ ರಾಜ್‌ಕುಮಾರ್ ಅವರು, ಬಿಜೆಪಿಯ ಅಣ್ಣಾಮಲೈ ಅವರಿಂದ ೧೩ ಸಾವಿರದ ೬೪೧ ಮತಗಳಿಂದ ಮುನ್ನಡೆ ಸಾಧಿಸಿದ್ದಾರೆ. ಒಡಿಶಾದ ಪುರಿ ಕ್ಷೇತ್ರದಲ್ಲಿ ಬಿಜೆಪಿಯ ಸಂಬಿತ್ ಪಾತ್ರ ಅವರು, ಬಿಜೆಡಿಯ ಅರೂಪ್ ಮೋಹನ್ ಪಟ್ನಾಯ್ಕ್ ಅವರ ವಿರುದ್ಧ ೪೧ ಸಾವಿರದ ೧೧೬ ಮತಗಳ ಮುನ್ನಡೆಯಲ್ಲಿದ್ದಾರೆ. ಉತ್ತರಪ್ರದೇಶದ ಮೈನ್‌ಪುರಿ ಕ್ಷೇತ್ರದಲ್ಲಿ ಬಿಜೆಪಿಯ ಜೈವೀರ್ ಸಿಂಗ್ ವಿರುದ್ಧ ಸಮಾಜವಾದಿ ಪಕ್ಷದ ಡಿಂಪಲ್ ಯಾದವ್ ಅವರು ೮೮ ಸಾವಿರದ ೮೬೪ ಮತಗಳಿಂದ ಮುನ್ನಡೆ ಸಾಧಿಸಿದ್ದಾರೆ.

******

ಉತ್ತರಪ್ರದೇಶದ ೮೦ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ೩೭ ರಲ್ಲಿ ಮುನ್ನಡೆ ಸಾಧಿಸಿದೆ, ಸಮಾಜವಾದಿ ಪಕ್ಷ ೩೩ ಸ್ಥಾನಗಳಲ್ಲಿ ಮೇಲುಗೈ ಸಾಧಿಸಿದೆ. ಕಾಂಗ್ರೆಸ್ ಕೇವಲ ೭ ಸ್ಥಾನಗಳಲ್ಲಿ ಮುನ್ನಡೆ ಪಡೆದಿದೆ. ಗುಜರಾತ್‌ನ ೨೬ ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ೨೪ ರಲ್ಲಿ ಮುನ್ನಡೆ ಸಾಧಿಸಿದರೆ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ೨ ಕ್ಷೇತ್ರಗಳಲ್ಲಿ ಮೇಲುಗೈ ಸಾಧಿಸಿದೆ. ಪಂಜಾಬ್‌ನ ೧೩ ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ೭ ಅಭ್ಯರ್ಥಿಗಳು ಮುನ್ನಡೆ ಸಾಧಿಸಿದರೆ, ಆಮ್ ಆದ್ಮಿ ಪಕ್ಷದ ಮೂವರು ಅಭ್ಯರ್ಥಿಗಳು ಹಾಗೂ ಶಿರೋಮಣಿ ಅಕಾಲಿ ದಳದ ಇಬ್ಬರೂ ಅಭ್ಯರ್ಥಿಗಳು ಮೇಲುಗೈ ಸಾಧಿಸಿದ್ದಾರೆ. ಪಶ್ಚಿಮಬಂಗಾಳದ ೪೨ ಸ್ಥಾನಗಳಲ್ಲಿ ತೃಣಮೂಲ

ಕಾಂಗ್ರೆಸ್ ೩೧ ಕ್ಷೇತ್ರಗಳಲ್ಲಿ ಮುನ್ನಡೆ ಕಾಯ್ದುಕೊಂಡಿದೆ. ಬಿಜೆಪಿ ೧೦ ಕ್ಷೇತ್ರಗಳಲ್ಲಿ ಹಾಗೂ ಕಾಂಗ್ರೆಸ್ ೧ ಕ್ಷೇತ್ರದಲ್ಲಿ ಮುನ್ನಡೆಯತ್ತ ಸಾಗುತ್ತಿದೆ. ತಮಿಳುನಾಡಿನ ೩೯ ಕ್ಷೇತ್ರಗಳಲ್ಲಿ ಡಿಎಂಕೆ ೨೧ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಕಾಂಗ್ರೆಸ್ ೮ ಕ್ಷೇತ್ರಗಳಲ್ಲಿ ಮೇಲುಗೈ ಸಾಧಿಸಿದೆ. ಉಳಿದಂತೆ ಇತರೆ ಪಕ್ಷಗಳ ೧೦ ಅಭ್ಯರ್ಥಿಗಳು ಮುನ್ನಡೆಯತ್ತ ಸಾಗುತ್ತಿದೆ. ತೆಲಂಗಾಣದ ೧೭ ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ತಲಾ ೮ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದು, ಎಐಎಂಐಎಂ ೧ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಿದೆ.

*****

ಮಹಾರಾಷ್ಟ್ರದ ಒಟ್ಟು ೪೮ ಕ್ಷೇತ್ರಗಳ ಪೈಕಿ ಬಿಜೆಪಿ ೧೩ ಸ್ಥಾನಗಳಲ್ಲಿ, ಎಸ್ ಎಚ್ ಎಸ್ ಯುಬಿಟಿ ೧೦, ಕಾಂಗ್ರೆಸ್ ೯, ಎನ್ ಸಿಪಿ ಎಸ್ ಪಿ ೮, ಎಸ್‌ಎಚ್‌ಎಸ್ ೭, ಎನ್ ಸಿ ಪಿ ಒಂದು ಹಾಗೂ ಪಕ್ಷೇತರರು ಒಂದು ಸ್ಥಾನದಲ್ಲಿ ಮುನ್ನಡೆಯಲಿದ್ದಾರೆ. ಬಿಜೆಪಿ ಮಧ್ಯಪ್ರದೇಶದ ಎಲ್ಲ ೨೯, ಹಿಮಾಲಚಪ್ರದೇಶದ ಎಲ್ಲಾ ೪ ಸ್ಥಾನಗಳಲ್ಲಿ, ಉತ್ತರಾಖಂಡದ ಎಲ್ಲಾ ೫ ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ.

*****

ಕೇರಳ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ತನ್ನ ಖಾತೆ ಆರಂಭಿಸುವ ಸಾಧ್ಯತೆ ಇದೆ. ತ್ರಿಶ್ಯೂರ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ, ಜನಪ್ರಿಯ ಚಲನಚಿತ್ರನಟ ಸುರೇಶ್ ಗೋಪಿ ೭೫ ಸಾವಿರ ಮತಗಳಿಗಿಂತಲೂ ಹೆಚ್ಚು ಮತ ಮುನ್ನಡೆ ಪಡೆದಿದ್ದಾರೆ. ತಿರುವನಂತಪುರಂನಲ್ಲಿ ಬಿಜೆಪಿ ಅಭ್ಯರ್ಥಿ, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ಕಾಂಗ್ರೆಸ್‌ನ ಹಾಲಿ ಸಂಸದ ಶಶಿ ತರೂರ್ ವಿರುದ್ಧ ೧೧ ಸಾವಿರಕ್ಕಿಂತಲೂ ಹೆಚ್ಚು ಮತಗಳಿಂದ ಮುನ್ನಡೆ ಪಡೆದಿದ್ದಾರೆ. ವೈನಾಡು ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ೨ ಲಕ್ಷದ ೪೦ ಸಾವಿರ ಮತಕ್ಕಿಂತಲೂ ಹೆಚ್ಚು ಮುನ್ನಡೆ ಪಡೆದಿದ್ದಾರೆ. ಒಟ್ಟು ೨೦ ಕ್ಷೇತ್ರಗಳಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ೧೭ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಎಲ್‌ಡಿಎಫ್ ೧ ಕ್ಷೇತ್ರದಲ್ಲಿ ಮುನ್ನಡೆ ಪಡೆದುಕೊಂಡಿದೆ.

*****

ಉತ್ತರ ಪ್ರದೇಶದ ರಾಯ್‌ಬರೇಲಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ರಾಹುಲ್ ಗಾಂಧಿ ಒಂದು ಲಕ್ಷದ ೮೭ ಸಾವಿರದ ೫೦೮ ಮತಗಳ ಮುನ್ನಡೆ ಸಾಧಿಸಿದ್ದಾರೆ.

*****

ಕರ್ನಾಟಕದ ೨೮ ಲೋಕಸಭಾ ಕ್ಷೇತ್ರಗಳ ಪೈಕಿ ಬಿಜೆಪಿ ೧೯ ಕ್ಷೇತ್ರಗಳಲ್ಲಿ, ಜೆಡಿಎಸ್ ೨ ಹಾಗೂ ಕಾಂಗ್ರೆಸ್ ೧೦ ಕ್ಷೇತ್ರಗಳಲ್ಲಿ ಮುನ್ನಡೆಯಲ್ಲಿದೆ.

****

ಆಂಧ್ರಪ್ರದೇಶದ ೧೭೫ ವಿಧಾನಸಭಾ ಕ್ಷೇತ್ರಗಳಲ್ಲಿ ಮತ ಎಣಿಕೆ ಪ್ರಗತಿಯಲ್ಲಿದ್ದು, ಟಿಡಿಪಿ ೧೩೧, ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ವೈಎಸ್ ಆರ್ ಸಿ ಪಿ- ೧೭, ಜೆಎನ್ ಪಿ-೨೦ ಹಾಗೂ ಬಿಜೆಪಿ ೭ ಸ್ಥಾನಗಳಲ್ಲಿ ಮೇಲುಗೈ ಪಡೆದಿವೆ. ಒಡಿಶಾದ ೧೪೭ ವಿಧಾನಸಭಾ ಕ್ಷೇತ್ರಗಳ ಪೈಕಿ ಬಿಜೆಪಿ ೭೫ ಸ್ಥಾನಗಳಲ್ಲಿ ಮೇಲುಗೈ ಸಾಧಿಸಿದೆ. ಬಿಜೆಡಿ ೫೭, ಕಾಂಗ್ರೆಸ್ ೧೨, ಪಕ್ಷೇತರರು ೨ ಹಾಗೂ ಸಿಪಿಐಎಂ ಒಂದು ಕ್ಷೇತ್ರದಲ್ಲಿ ಮತಗಳಿಕೆಯಲ್ಲಿ ಮುಂದಿದ್ದಾರೆ. ಕರ್ನಾಟಕದ ಶೋರಾಪುರ್ ವಿಧಾನಸಭಾ ಉಪಚುನಾವಣೆಯ ಮತ ಎಣಿಕೆ ನಡೆದಿದ್ದು, ಕಾಂಗ್ರೆಸ್ಸಿನ ರಾಜಾ ವೇಣುಗೋಪಾಲ್ ನಾಯಕ್ ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ನರಸಿಂಹ ನಾಯಕ್ ಅವರಿಗಿಂತ ೧೪ ಸಾವಿರದ ೪೦೭ ಮತಗಳಿಂದ ಮೇಲುಗೈ ಸಾಧಿಸಿದ್ದಾರೆ.

*****END*****